ರಶ್ ಇರುವ ಟ್ರೇನುಗಳಲ್ಲಿ ಬಸ್ಸುಗಳಲ್ಲಿ ನುಗ್ಗಿ ನುಸುಳಿ ಹೋಗುತ್ತೇವೆ. ಈ ಮಹಾರಾಯ ಕೆಲಸಕ್ಕಾಗಿ ಈಜಿ ಬರುತ್ತಾನೆ! ಈ ಜೀವನ ನನಗೆ ಬಹಳ ಇಷ್ಟವಾಯ್ತು."

ವಿಲ್ಲೀಯ ಗುಣಗಾನ ಮಾಡುವುದನ್ನು ಗಮನಿಸಿದಾಗ ಮಿಮಿಯ ಸಂಶಯ ಮತ್ತಷ್ಟು ಹೆಚ್ಚಾಗಿ ಕೇಳೇಬಿಟ್ಟಳು –"ನಿಮ್ಮಿಬ್ಬರಲ್ಲಿ ಏನೋ ನಡೀತಾ ಇದೆ."

"ಅದ್ಹೇಗೆ ಹೇಳುತ್ತೀ?"

"ನಾನು ನಿನ್ನ ಬೆಸ್ಟ್ ಫ್ರೆಂಡ್. ಮೇಲಾಗಿ ನಿನ್ನ ಪಾಕೀಟಿನಲ್ಲಿರುವ ಆ ಉಂಗುರವನ್ನು ನಾನು ನೋಡಿದ್ದೇನೆ" ಎನ್ನುತ್ತ ನಕ್ಕಳು. ಅದೇ ಸಮಯಕ್ಕೆ ವಿಲ್ಲೀ ಕೈಮಾಡಿದ. ಪಾರಾದೆ ಎಂದುಕೊಳ್ಳುತ್ತ, "ನೋಡಲ್ಲಿ, ಅವನು ಕರೀತಾ ಇದ್ದಾನೆ. ಅವನಿಗೇ ಇಲ್ಲಿ ಬರಲು ಹೇಳು" ಅಂದಳು ಎಸ್ಟೆಲ್ಲಾ. ಮಿಮಿ ಹಾಗೇ ಮಾಡಿದಳು.

ನೀರಲ್ಲಿ ಸಂಪೂರ್ಣವಾಗಿ ನೆನೆದುಹೋಗಿದ್ದ ವಿಲ್ಲೀ ಇವರ ಎದುರಿಗೆ ಬಂದು ಕುಳಿತುಕೊಂಡ.

ಅವನ ಕಡೆ ನೇರ ದೃಷ್ಟಿಬೀರಿದ ಎಸ್ಟೆಲ್ಲಾ, "ನಿಮಗೊಂದು ವಿಷಯ ಹೇಳಬೇಕು" ಎಂದಳು.

"ಹೇಳಿ" ಎಂದ ಆತ, ಕೆಳಗೆ ನೋಡುತ್ತ.

"ನಾನು ಈವತ್ತು ಮುಳುಗಿಹೋಗಬಹುದಿತ್ತು."

"ಅದು ಗೊತ್ತಾಯಿತು ನನ್ನವರಿಂದ. ಮತ್ತೇನು?"

ಮಿಮಿ ಈಗ ಬಾಯಿ ಹಾಕಿದಳು. "ಇಲ್ಲಿಯ ಲೈಫ್ ಗಾರ್ಡ್ಸ್ ಕೆಲಸದಲ್ಲಿ ದಕ್ಷರು. ಆದರೆ ಅವರ ವರ್ತನೆ ಸರಿಯಿಲ್ಲ. ಅವರು ಒರಟರು. ನಾವು ಧನ್ಯವಾದ ಹೇಳಿದರೆ ಸ್ವೀಕರಿಸುವ ಸೌಜನ್ಯತೆ ಕೂಡ ಅವರಲ್ಲಿಲ್ಲ" ಎಂದಳು.

"ಇದನ್ನು ಹೇಳುವುದಕ್ಕೇ ನನ್ನನ್ನು ಕರೆದಿರಾ?"– ಕೇಳಿದನಾತ. ಮುಂದುವರಿದು, "ಅವರು ತುಂಬಾ ಮುಗ್ಧರು. ನಿಮ್ಮ ಹಾಗೆ ಫ್ಯಾಶನ್ ಸ್ಕೂಲಿನಲ್ಲಿ ಕಲಿತವರಲ್ಲ. ಅವರ ಕೆಲಸ ಅವರಿಗೆ ಗೊತ್ತು ಸಾಕಲ್ಲ? ಸಿಲ್ಲಿ ವಿಷಯಗಳ ಸಲುವಾಗಿ ತಲೆ ಕೆಡಿಸಿಕೋಬೇಡಿ, ನನ್ನ ಸಮಯ ಹಾಳು ಮಾಡಬೇಡಿ" ಎಂದು ಉಪದೇಶಿಸಿ ಎದ್ದ.

"ಒಂದ್ನಿಮಿಷ, ಇನ್ನೊಂದು ವಿಷಯ" ಎಂದಳು ಎಸ್ಟೆಲ್ಲಾ.

" ನೀವು ನೋಡಿದ್ದರ ಬಗ್ಗೆಯೇ?"– ಕೇಳಿದ ವಿಲ್ಲಿ, ನೇರವಾಗಿ ಎಸ್ಟೆಲ್ಲಾಳನ್ನು ನೋಡದೆ, ಅವಳ ಕಣ್ಣು ತಪ್ಪಿಸಿ.

ಮಿಮಿ ಈ ಸಲ ಮಾತಿಗಿಳಿದಳು. "ಹೌದು, ನೋಡುತ್ತಲೇ ಇದ್ದೇವೆ. ಮನುಷ್ಯರೂಪಿಯಾದ ಆ ಪ್ರಾಣಿಗಳು ವಾಯುಕೊಳವೆಗಳಿಲ್ಲದೆಯೇ ಓಡಾಡಿಕೊಂಡಿರುತ್ತವಲ್ಲಾ? ಅವನ್ನು ಬಿಡಿ, ನಮ್ಮ ರಕ್ಷಣೆಗಾಗಿ ಬಂದ ಗಾರ್ಡ್ಸ್ ಕೂಡ ಕೊಳವೆ ಇಲ್ಲದೆಯೆ ಬಂದಿದ್ದರು. ನಮ್ಮೊಡನೆ ಒಂದಲ್ಲ, ಎರಡಲ್ಲ, ಹದಿನೈದು ನಿಮಿಷ ಇದ್ದರು. ಯಾರವರು, ಮನುಷ್ಯರೋ ಅಥವಾ ಮನುಷ್ಯರೂಪೀ ದೆವ್ವಗಳೋ? ಅವರಿಗೇಕೆ ವಾಯುಗೊಳವೆಗಳು ಬೇಡ?"

ವಿಲ್ಲೀ ದೃಷ್ಟಿ ತಗ್ಗಿಸಿದ.

"ಪ್ರಶ್ನೆಗೆ ಉತ್ತರ ಕೊಡಿ" – ಮಿಮಿ ಒತ್ತಾಯಿಸಿದಳು.

ವಿಲ್ಲೀ ತಡಬಡಿಸಿದ.

"ಯಾವುದನ್ನು ನಿಮಗೆ ಹೇಳಬಾರದೆಂದಿದ್ದೆನೋ ಅದನ್ನು ಹೇಳುವ ಕಾಲ ಈಗ ಬಂತು" ಎಂದ.

ಇಬ್ಬರೂ ಗೆಳತಿಯರು ಪರಸ್ಪರ ಮುಖಗಳನ್ನು ನೋಡಿಕೊಂಡರು.